ಓದಬೇಕೆಂದು ಬಿಗಿಗೊಳಿಸಿದ ಕಾರಣ, ಧರ್ಮದ ಪರಿಕಲ್ಪನೆ ನೆಲಕಚ್ಚಿತು; ಬದುಕಿನ ಸುಂದರ ಭಾಗಗಳಾಗಿ ಮನಸ್ಸನ್ನು ಹದಗೊಳಿಸುತ್ತಿದ್ದ ಕವಿತೆ, ಸಾಹಿತ್ಯ, ಕಲಾತ್ಮಕ ಪರಂಪರೆಯ ನಾಶವಾಗಿ ಮನಸ್ಸುಗಳ ಒರಟುತನ ಹೆಚ್ಚಿತು. ಚೀನಾದ ಗೋಡೆಯೊಳಗೆ ದೇಶವನ್ನು ಬಚ್ಚಿಟ್ಟು ಕಾಪಾಡಲು ಹೊರಟ ಅವನ ಕಟುತತ್ವಗಳು ಹೇಗೆಲ್ಲಾ ತಲೆಕೆಳಗಾದವು ಎನ್ನುವುದನ್ನು ಓದುವಾಗ ಅಚ್ಚರಿಯಾಗದಿರದು. ಎಲ್ಲಕ್ಕಿಂತ ಇಂದಿಗೆ ಪ್ರಸ್ತುತ ಎನ್ನುವ ಒಂದು ಪ್ರಕರಣ ಅರಿಯಲೇಬೇಕು. ಅದೇನೆಂದರೆ, ತನ್ನ ಯೋಜನೆಯೊಂದರ ಅನುಷ್ಠಾನಕ್ಕೆ ಪ್ರಕೃತಿಗೇ ಸೆಡ್ಡು ಹೊಡೆಯಲು ಹೋದ ಮಾವೋನ ಕುರುಡುತನದ ಯೋಜನೆಗೆ ಸಂಬಂಧಿಸಿದ್ದು. 'ಗುಬ್ಬಿಗಳ ಮೇಲೆ ಬ್ರಹ್ಮಾಸ್ತ್ರ ಪ್ರಯೋಗ...!'

1958ರಲ್ಲಿ ಚೀನಾದ ಆರ್ಥಿಕತೆ ಕುಸಿದಿತ್ತು. ಜನಸಂಖ್ಯೆ ಸಿಕ್ಕಾಪಟ್ಟೆ ಏರಿತ್ತು. ಹಸಿವಿನ ಹಾಹಾಕಾರ ಮುಗಿಲು ಮುಟ್ಟಿತ್ತು. ಮಾವೋ ತಲೆಯಲ್ಲಿ 'ಅದ್ಭುತ' ಯೋಚನೆಯೊಂದು ಹೊಳೆದು ಯೋಜನೆಯಾಗಿ ಹೊರಬಿತ್ತು. ಅದುವೇ 'ದಿ ಫೋರ್‌ಪೆಸ್ಟ್ ಕ್ಯಾಂಪೈನ್'. ನೊಣ, ಸೊಳ್ಳೆ, ಇಲಿ ಮತ್ತು ಗುಬ್ಬಚ್ಚಿಗಳ ನಾಶಕ್ಕೆ ಕರೆ ಕೊಟ್ಟ ಅಭಿಯಾನ ಅದು! ಮಾವೋ ಯೋಚಿಸಿದ, 'ಸಾವಿರಾರು ಸಂಖ್ಯೆಯಲ್ಲಿರುವ ಗುಬ್ಬಚ್ಚಿಗಳು, ಬೆಳೆದ ಪೈರನ್ನು ಅಷ್ಟಿಷ್ಟನ್ನಾದರೂ ತಿನ್ನುತ್ತವೆ. ಇದರಿಂದ ಮನುಷ್ಯನಿಗೆ ಸಿಗಬೇಕಾದ ಧಾನ್ಯದ ಪ್ರಮಾಣ ಕಡಿಮೆಯಾಗುತ್ತದೆ, ಪ್ರಜೆಗಳ ಹಸಿವು ಇಂಗಿಸಲು ಕಷ್ಟವಾಗುತ್ತದೆ. ಹಾಗಾಗಿ ಗುಬ್ಬಚ್ಚಿಗಳನ್ನೇ ನಾಶ ಮಾಡಿದರೆ? ಆಗ ಸಮೃದ್ಧಿಯಾಗಿ ಬೆಳೆ ಕೈಗೆ ಸಿಗುವುದು, ದೇಶದ ಹಸಿವಿನ ಹಾಹಾಕಾರ ನೀಗುವುದು' ಎಂದು...! ಈ ಯೋಚನೆಯ ಬೆನ್ನಿಗೇ, 'ದೇಶದ ಗುಬ್ಬಚ್ಚಿಗಳನ್ನೆಲ್ಲಾ ಸಾಯಿಸಿಬಿಡಿ' ಎಂದು ಆಜ್ಞೆ ಮಾಡಿಬಿಟ್ಟ. ಕಂಡಲ್ಲಿ ಗುಂಡು... ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ...

ಗುಬ್ಬಚ್ಚಿಗಳ ಮಾರಣಹೋಮ ಆರಂಭವಾಗೇಬಿಟ್ಟಿತು. ಕಣ್ಣಿಗೆ ಬಿದ್ದವೆಲ್ಲಾ ಸತ್ತವು ಮನುಜಜನ ಕ್ರೌರ್ಯಕ್ಕೆ. ದೊಡ್ಡ ಡ್ರಮ್‌ಗಳನ್ನು ತಂದು ಕರ್ಕಶವಾಗಿ ಬಾರಿಸುತ್ತಾ, ಅಟ್ಟಿಸಿಕೊಂಡು ಹೋದಾಗ, ಹೆದರಿಕೆಯಲ್ಲಿ ಕಂಗಾಲಾಗಿ ಹಾರಿ ಹಾರಿ, ಕಡೆಗೆ ಹಾರಲು ಶಕ್ತಿಯೂ ಕಡಿಮೆಯಾದ ಗುಬ್ಬಿಗಳು ಆಸರೆಗೆಂಬಂತೆ ನೆಲಕ್ಕೆ ಕಾಲೂರಿದಾಗ ನಿರ್ದಯವಾಗಿ ಬಡಿದು, ಗುಂಡು ಹಾರಿಸಿ ಕೊಲ್ಲಲಾಯ್ತು. 'ಗುಬ್ಬಿಯ ಮೇಲಣ ಬ್ರಹ್ಮಾಸ್ತ್ರ'ಕ್ಕೆ ಹತವಾದ ಸಂಖ್ಯೆ ಕೋಟಿ, ಕೋಟಿಗಟ್ಟಲೆ...!

ಪ್ರಕೃತಿಯನ್ನೇ ಮಣಿಸಲು ನೋಡಿದ ಧೀರ ನಾಯಕ ಮಾವೋ. ಆದರೆ, ಪ್ರಕೃತಿ ತನ್ನ ಮೇಲಣ ಈ ಅಮಾಯಕ ಅತ್ಯಾಚಾರಕ್ಕೆ ಸುಮ್ಮನುಳಿಯಲಿಲ್ಲ, ಬರ್ಬರವಾಗಿ ಸೇಡು ತೀರಿಸಿಕೊಂಡಿತು. 'ಸಮತೋಲನ ಸಾಧನೆ' ಪ್ರಕೃತಿ ನಿಯಮ. ಅದು ತನ್ನ ಪಾಡಿಗೆ ಸದ್ದಿಲ್ಲದಂತೆ ಆ ಕೆಲಸವನ್ನು ಮಾಡಿಕೊಂಡಿಯೇ ಬಂದಿರುತ್ತದೆ. ಈಗ ಆ ಸಮತೋಲನದ ಒಂದು ಭಾಗ ನಾಶವಾಗಿದ್ದು ಇನ್ನೊಂದರ ಏರಿಕೆಯನ್ನು



ಮಾಡಿಬಿಟ್ಟಿತು. ಮಿಡತೆಗಳಂತಹ ಕೀಟಗಳ ಸಂಖ್ಯೆ ಎಗ್ಗಿಲ್ಲದಂತೆ ಹೆಚ್ಚಿತು. ಮಿಡತೆಗಳು ಗುಬ್ಬಚ್ಚಿಯ ಆಹಾರ. ಯಾವಾಗ ಗುಬ್ಬಿಗಳು ಕಣ್ಮರೆಯಾದವೋ ಮಿಡತೆಗಳ ಸಂತತಿ ಹೆಚ್ಚಿ, ಅವು ಭತ್ತದಂತಹ ಆಹಾರಬೆಳೆಗಳನ್ನು ಅಪಾರ ಪ್ರಮಾಣದಲ್ಲಿ ನಾಶಗೈದವು. ತತ್ಫಲ, ಚೀನಾದಲ್ಲಿ ಕಂಡು ಕೇಳರಿಯದ ದುರ್ಭರ ಕ್ಷಾಮ! ಜನಸಂಖ್ಯೆ ಏರಿತು, ಆಹಾರವಿಲ್ಲ. ಹಸಿವಿನ ಹಾಹಾಕಾರದಲ್ಲಿ ಜನ ಹುಳುವಿನಂತೆ ಸತ್ತರು, ಅದೂ ಲಕ್ಷಲಕ್ಷ ಸಂಖ್ಯೆಯಲ್ಲಿ. ಮಾವೋನ ಕೃತ್ಯಕ್ಕೆ ಅದೇ ಮಟ್ಟದ ಸೇಡನ್ನು ಪ್ರಕೃತಿ ತೀರಿಸಿಕೊಂಡಿತ್ತು...!

ಆದರೆ, ಇದೂ ಕೂಡ ಜಗತ್ತಿನಲ್ಲಿ ಸುದ್ದಿಯಾಗದಂತೆ, ಮಾವೋ ಸರ್ಕಾರ ಮಾಧ್ಯಮಗಳಿಗೆ ನಿರ್ಬಂಧ ವಿಧಿಸಿತ್ತು. ಎಷ್ಟೋ ವರ್ಷಗಳ ತರುವಾಯ, ಪತ್ರಕರ್ತನೊಬ್ಬ ಪುಸ್ತಕ ಬರೆದ. 'ಈ ಭೀಕರ ಕ್ಷಾಮದ ಅವಧಿಯಲ್ಲಿ ಹಸಿವಿನ ಸಂಕಟ ತಾಳಲಾರದೆ ಮಕ್ಕಳು ಹೆತ್ತವರನ್ನು, ಹೆತ್ತವರು ಮಕ್ಕಳನ್ನು ಕೊಂದು ತಿಂದರು. 3.6 ಕೋಟಿ ನಾಗರಿಕರು ಸತ್ತರು' ಎಂದು. ಆ ಪುಸ್ತಕವನ್ನು ಕೂಡ ಸರ್ಕಾರ ನಿಷೇಧಿಸಿಬಿಟ್ಟಿತು.

ಕವಿ ಚಂದ್ರಶೇಖರ ಕಂಬಾರರು ಮಾವೋನ ಕುರಿತು – 'ಹಳದಿಯ ಬೆಳದಿ, ಹಳದಿಯ ಬಿತ್ತಿದಿ... ಕಣ್ಣಿನ ಹಳದಿ ತಿಳಿಯದೆ ಹೋದಿ, ಮರೆತೇನೆಂದರ ಮರೆಯಲಿ ಹ್ಯಾಂಗಾ, ಮಾವೋತ್ಸೆ ತುಂಗ' ಎಂದು ಹಾಡಿದ್ದಾರೆ. ನಿಜ. 'ಹಳದಿಯ ಜನಾಂಗ'ವನ್ನು ವೈಭವೀಕರಿಸಿ, ಅವರನ್ನು ಬಲಿಷ್ಠವಾಗಿಸುವ ಪ್ರಯತ್ನಗಳಿಗೆ ಕೈಹಾಕಿದ ಮಾವೋ. ರಾಷ್ಟ್ರಧ್ವಜದಲ್ಲಿ ಚೀನಾದ ಪ್ರತಿಷ್ಠೆ, ಜೀವನದಿಯಾದ 'ಯೆಲ್ಲೋ ರಿವರ್' ಚಿತ್ರವನ್ನು ಬಳಸಬೇಕೆಂದು ನಕ್ಷೆ ತಯಾರಿಸಿದ. ಅದು ಸರಿಕಾಣದೆ, ಕೆಂಪು ಬಣ್ಣದ ಮೈಮೇಲೆ ಹಳದಿಯ ಐದು ನಕ್ಷತ್ರಗಳನ್ನು ಹಾಕಿಸಿದ. 'ಹಳದಿ ಸೂರ್ಯನನ್ನು ಬಿಂಬಿಸುವ ಬಣ್ಣ', ತಾನೇ ಚೀನಾದ ಸೂರ್ಯ ಎಂದು ಘೋಷಿಸಿದ. ಹಾಗಾಗಿ ಬಾವುಟದಲ್ಲಿ ದೊಡ್ಡದಾದ ಹಳದಿ ಸೂರ್ಯನ ಚಿತ್ರ ಹಾಕಿ ಅದು ತಾನೇ ಎಂದ. ಇನ್ನುಳಿದ ನಾಲ್ಕು ಹಳದಿಯ ನಕ್ಷತ್ರಗಳು ದೇಶದ ವರ್ಗಗಳ ಪ್ರತಿನಿಧಿಗಳಾದವು.

ರಷ್ಯಾದ ಕಮ್ಯೂನಿಸಂ ಅನ್ನು ಗಟ್ಟಿಯಾಗಿ ಪ್ರತಿಪಾದಿಸಿದ ಮಾವೋನನ್ನು ಜನರೂ ಮೆಚ್ಚಿ ಆರಾಧಿಸಿದರು. ಆದರೆ, ಹಿಂದೆ ಹೇಳಿದಂತೆ ಅನೇಕ ಎಡವಟ್ಟುಗಳು, ತನ್ನದೇ ಶ್ರೇಷ್ಠ ಎನ್ನುವ ಬಿಗಿ ಧೋರಣೆಯ (ಕಣ್ಣಿನಹಳದಿ) ಕಾರಣ ಮಾವೋ ಚೀನಾವನ್ನು ಸರ್ವಾಂಗೀಣವಾಗಿಸುವಲ್ಲಿ ಎಡವಿದ್ದಲ್ಲದೆ, ಅನೇಕ ವಿಪತ್ತುಗಳಿಗೆ ಕಾರಣನಾಗಿ, ಬಹಳ ಮಂದಿಯ ಕೆಂಗಣ್ಣಿಗೆ ಗುರಿಯಾದದ್ದೂ ಹೌದು.

ಮಾವೋನ 27 ವರ್ಷಗಳ ನಾಯಕತ್ವದ ಮುಷ್ಠಿಯಲ್ಲಿ ಚೀನಾ ಅರಳಿದ್ದು ಇದೆ, ಸಾಕಷ್ಟು ನರಳಿದ್ದೂ ಇದೆ. ಒಂದುಕಡೆ ಪ್ರತಿಭಟನೆ, ಇನ್ನೊಂದು ಕಡೆ ಅವನ ತತ್ವಗಳಿಗೆ ಶರಣಾದ ಅನುಯಾಯಿಗಳು, ಹೀಗೆ ಎರಡು ದೋಣಿಯಲ್ಲೂ ಕಾಲಿಟ್ಟು ನಡೆದ ಮಾವೋತ್ಸೆ ತುಂಗ ಚರಿತ್ರೆಯಲ್ಲಿ 'ವಿವಾದಾತ್ಮಕ ನಾಯಕ' ಎಂದೇ ಗುರುತಿಸಿಕೊಳ್ಳುತ್ತಾನೆ. ಮಾವೋನ ವೈಫಲ್ಯತೆಯನ್ನು ಅವನ ಆರಾಧಕರು ಕಡೆಗಣಿಸಲು ಕಾರಣ, ಚೀನಾವನ್ನು ಭವಿಷ್ಯದಲ್ಲಿ ಬಲಶಾಲಿ ರಾಷ್ಟ್ರವಾಗುವಂತೆ ಮಾವೋ ಹಾಕಿದ ಮುನ್ನುಡಿ, ಕಠಿಣ ತತ್ವಗಳಿಗಾಗಿ.

ಪ್ರಸ್ತುತ ಕೂಡ ಚೀನಾದಲ್ಲಿ ನಡೆದ ಒಂದು ಅನಾಹುತ ಇಡೀ ಮನುಷ್ಯಕುಲದ ಮೇಲೆ ತಿರುಗಿಬಿದ್ದಿದೆ; ಮರಣ ಮೃದಂಗ ಬಾರಿಸುತ್ತಿದೆ; ಗುಬ್ಬಿಗಳನ್ನು ಸಂಹರಿಸಿ ಪ್ರಕೃತಿ ಮಣಿಸಲು ಹೋದ ಮಾವೋ ನಿರ್ಧಾರಕ್ಕೆ ಕೋಟಿಗಟ್ಟಲೆ ಪ್ರಜೆಗಳು ಸ್ವಂತ ನೆಲದಲ್ಲೇ ಜೀವ ಕಳೆದುಕೊಂಡಂತೆ...! ಪ್ರಶ್ನೆಗಳು ಹುಟ್ಟಿವೆ ಇನ್ನಿಲ್ಲದಷ್ಟು... ಅಂದಿನ ಗುಬ್ಬಚ್ಚಿಗಳ ಪ್ರಸಂಗದಂತೆ ಇದೂ ಕೂಡ ನಾವು ಪ್ರಕೃತಿಯನ್ನು ಯದ್ವಾತದ್ವಾ ಬಳಸಿಕೊಂಡು, ಅನಾದರ ಮಾಡಿದ್ದಕ್ಕಾ...? ಭೂಕಂಪ, ಚಂಡಮಾರುತ, ಸುನಾಮಿ, ಪ್ರವಾಹ, ಬಿಸಿಲಝಳ, ಕಾಳ್ಗಿಚ್ಚು... ಎಷ್ಟೆಷ್ಟು ರೀತಿಯಲ್ಲಿ ತನ್ನ ಒಡಲಾಳ ಬಿಚ್ಚಿಟ್ಟರೂ ನಮಗೆ ಅರ್ಥವಾಗಲಿಲ್ಲವಾ? ಇಷ್ಟಾದರೂ ಮನುಕುಲ ಮಣಿಯಲಿಲ್ಲ. ಅವ್ಯಾಹತ ದಾಳಿ ಮಾಡುವುದನ್ನು ನಿಲ್ಲಿಸಲಿಲ್ಲ... ಎಂದಮೇಲೆ ಅಂದಿನಂತೆ ಇಂದೂ ಪ್ರಕೃತಿ ಸೇಡು ತೀರಿಸಿಕೊಳ್ಳುತ್ತಿದೆಯೇ?

ಇತಿಹಾಸ ಓದುವುದು ಪಾಠ ಕಲಿಯಲು. ಆದರೆ, ನಾವು ಓದುತ್ತೇವೆಯೇ ವಿನಾ ಪಾಲಿಸುವವರಲ್ಲ ಎನ್ನುವುದು ಸಾಬೀತಾಗುತ್ತಲೇ ಇದೆ. ಈಗ ಜವರಾಯ ಕುಡುಗೋಲು ಹಿಡಿದು ಕಂಡಕಂಡಲ್ಲೆಲ್ಲ ಬೀಸುತ್ತಾ ಮಾರಣಹೋಮ ಮಾಡುತ್ತಿರುವಾಗ, ಮುಂದೇನು ಎಂದೇ ತಿಳಿಯದ ಭವಿಷ್ಯದಲ್ಲಿ ಸಿಕ್ಕಿರುವಾಗ, ಹಳದಿಯ ಬಿತ್ತಿ ಹಳದಿಯ ಬೆಳೆದು ಕಣ್ಣಿನ ಕಾಮಾಲೆ ತಿಳಿಯದೆ ಹೋದ ಮಾವೋತ್ಸೆತುಂಗ ನೆನಪಾಗುತ್ತಿರುವುದು ಕಾಕತಾಳೀಯವೇ?

ಪ್ರತಿಕ್ರಿಯಿಸಿ: **feedback@sudha.co.in**